# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಡಿ\1288\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:19/02/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ಕೊಳತ್ತೂರು ಗ್ರಾಮ ಪಂಚಾಯತ್‌ನ 1) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಬೈರೆಡ್ಡಿ, 2) ಅಧ್ಯಕ್ಷರಾಗಿದ್ದ ಶ್ರೀಮತಿ.ಕೃಷ್ಣಮ್ಮ ಮತ್ತು 3) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಪಿ.ಎಸ್.ಚಂದ್ರಮೋಹನ್ ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕ್ ಚೇಳೂರು ಹೋಬಳಿ ಪುಳಗಲ್ ಅಂಚೆ ಊದವಾರಪಲ್ಲಿ ಗ್ರಾಮದ ನಿವಾಸಿಯಾದ ಶ್ರೀ.ವಿ.ರಾಮಕೃಷ್ಣಪ್ಪ ಬಿನ್ ಲೇಟ್.ಆಂಜನೇಯಲು (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ಕೊಳತ್ತೂರು ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಬೈರೆಡ್ಡಿ (ಇನ್ನು ಮುಂದೆ, 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶ್ರೀನಿವಾಸಪುರ ತಾಲ್ಲೂಕ್ ಕೊಳತೂರು ಗ್ರಾಮ ಪಂಚಾಯತ್‌ಗೆ 14ನೇ ಹಣಕಾಸು ಯೋಜನೆ ಅಡಿ ದಿ:01/01/16 ರಿಂದ 30/12/2017 ರವರೆಗೆ ಎಷ್ಟು ಹಣ ಬಂದಿದೆ? ಬಂದಿರುವ ಹಣವನ್ನು ಯಾವ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ? ಕ್ರಿಯಾ ಯೋಜನೆ, ಬ್ಯಾಂಕ್ ಫಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಕೇಳಿದಾಗ್ಯೂ ಎದುರುದಾರರು ಬ್ಯಾಂಕ್ ಫಾರ್ ಶೀಟನ್ನು ಮಾತ್ರ ಕೊಟ್ಟಿದ್ದಾರೆ. ಆದರೆ, ಇದಕ್ಕೆ ಸಂಬಂಧಿಸಿದ ನಗದು ವಹಿ ಮತ್ತು ವೋಚರ್‌ಗಳನ್ನು ನೀಡಿಲ್ಲ. ದಾಖಲೆಗಳನ್ನು ನೀಡಿದರೆ ಅಕ್ರಮ ಬಯಲಿಗೆ ಬರುತ್ತದೆಂದು ದಾಖಲೆಗಳನ್ನು ಗೌಪ್ಯವಾಗಿ ಇರಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆಯೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರುದಾರರು ಕೋರಿರುವ ಮಾಹಿತಿಯನ್ನು ನೀಡಿದ್ದು, ದೂರಿನಲ್ಲಿ ಹೇಳಿದ ಅವಧಿಯಲ್ಲಿ ₹32,20,863/–ಗಳ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಖಾತೆಗೆ ಹಾಗೂ ಗ್ರಾಮ ಪಂಚಾಯತ್‌ನ ಅಂಗವಿಕಲರ ಖಾತೆಗೆ ಒಟ್ಟು ₹10,86,371/–ಗಳನ್ನು ಸರ್ಕಾರದ ನಿರ್ದೇಶನದಂತೆ ವರ್ಗಾವಣೆ ಮಾಡಿದೆ. ದಿನಾಂಕ:30/12/17ಕ್ಕೆ ಬ್ಯಾಂಕ್ ಪಾಸ್ ಶೀಟ್‌ನಲ್ಲಿ ₹13,61,067/–ಗಳಿದ್ದು, ದೂರುದಾರರು ನೀಡಿರುವ ದೂರು ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಸದರಿಯವರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದಾರೆ.

5. ಎರಡು (2) ಮತ್ತು 3ನೇ ಎದುರುದಾರರನ್ನು ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಗಿ, 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರಿನ ಆಪಾದನೆಗಳನ್ನು ಅಲ್ಲಗಳೆಯುತ್ತಾ, ದೂರುದಾರರು ಕೇಳಿದ ಮಾಹಿತಿಯನ್ನು ದಿನಾಂಕ:15/03/18ರಂದು ಅವರಿಗೆ ನೀಡಿದೆ. ಸರ್ಕಾರದ ನಿರ್ದೇಶನದಂತೆ 14ನೇ ಹಣಕಾಸು ಯೋಜನೆಯ ಬ್ಯಾಂಕ್ ಖಾತೆಯಿಂದ 22.75% ಹಣವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡ ಬ್ಯಾಂಕ್ ಖಾತೆಗೆ ಹಾಗೂ 3% ಹಣವನ್ನು ವಿಕಲಚೇತನರ ಖಾತೆಗೆ ಹೀಗೆ ಒಟ್ಟು ₹10,86,371/–ಗಳನ್ನು ಅಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ವರ್ಗಾಯಿಸಿರುವುದಾಗಿ ಹೇಳಿದ್ದಾರೆ.

6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, 2ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಹದಿನಾಲ್ಕನೇ ಹಣಕಾಸು ಯೋಜನೆ ಅಡಿ ಶ್ರೀನಿವಾಸಪುರ ತಾಲ್ಲೂಕ್ ಕೊಳತೂರು ಗ್ರಾಮ ಪಂಚಾಯತ್‌ನ ಖಾತೆಗೆ ದಿನಾಂಕ:01/01/16 ರಿಂದ 30/12/17ರ ಅವಧಿಯಲ್ಲಿ ಈ ಕೆಳಕಂಡ ದಿನಾಂಕಗಳಂದು ಜಮಾ ಆಗಿರುವುದು ಕಂಡು ಬಂದಿದೆ –

BD/1288/18



| ಕ್ರ. ಸಂ. | ದಿನಾಂಕ | ಮೊತ್ತ ₹ ಗಳಲ್ಲಿ |
|---|---|---|
| 1 | 05/05/16 | 541251.00 |
| 2 | 07/07/17 | 879334.00 |
| 3 | 09/11/17 | 907022.00 |
| ಒಟ್ಟು ಮೊತ್ತ | | 2327607.00 |

ಸದರಿ ಅವಧಿಯಲ್ಲಿ ಚೆಕ್‌ಗಳ ಮುಖೇನ ಬೇರೆ ಬೇರೆ ಖಾತೆಗಳಿಗೆ (ಸಂಖ್ಯೆ:064159812915ಗೆ ದಿನಾಂಕ:16/05/16, 19/05/16, 12/12/16, 14/02/17, 10/03/17 & 17/06/17; ಸಂಖ್ಯೆ:064095292097ಗೆ ದಿನಾಂಕ:23/05/16, 15/11/16, 13/02/17 & 20/11/17; ಸಂಖ್ಯೆ:064095291912 ದಿನಾಂಕ:07/11/16, 15/11/16 & 13/02/17; ಸಂಖ್ಯೆ:064025315224ಗೆ ದಿನಾಂಕ:10/02/17 & 05/06/17 ಇತ್ಯಾದಿ) ಹಣ ವರ್ಗಾವಣೆಯಾಗಿರುವುದಲ್ಲದೇ, ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳ ಹೆಸರಿಗೂ ಹಣ ನೀಡಿರುವುದು ಕಂಡು ಬಂದಿದೆ. ಸದರಿ ಚೆಕ್‌ನ ವಿವರಗಳು ಈ ಕೆಳಗಿನಂತಿದೆ –

| ಕ್ರ.ಸಂ. | ಹೆಸರು ಶ್ರೀ.\ ಶ್ರೀಮತಿ. | ಚೆಕ್ ಸಂಖ್ಯೆ & ದಿನಾಂಕ | ಮೊತ್ತ |
|---|---|---|---|
| 1 | ವಿ.ನಾರಾಯಣಸ್ವಾಮಿ | 981141, 19/05/16 | 14236.00 |
| 2 | ಸಿ.ಆರ್.ಶಿವರಾಜ್ | 981144, 21/05/16 | 27535.00 |
| 3 | --- | 981161, 07/11/16 | 15300.00 |
| 4 | ಸಿ.ಆರ್.ಶಿವರಾಜ್ | 981172, 09/12/16 | 14682.00 |
| 5 | ಸಿ.ಆರ್.ಶಿವರಾಜ್ | 981181, 14/02/17 | 24448.00 |
| 6 | --- | 981182, 14/02/17 | 13820.00 |
| 7 | ಶ್ರೀ ವಿನಾಯಕ ಇಂಜಿನಿಯರಿಂಗ್ | 981187, 28/03/17 | 16700.00 |
| 8 | ಶ್ರೀ ವಿನಾಯಕ ಇಂಜಿನಿಯರಿಂಗ್ | 981191, 24/04/17 | 16500.00 |
| 9 | ಗೋಪಾಲಕೃಷ್ಣ ರೆಡ್ಡಿ | 981193, 20/05/17 | 14585.00 |
| 10 | ಗೋಪಾಲಕೃಷ್ಣ ರೆಡ್ಡಿ | 981194, 20/05/17 | 19130.00 |
| 12 | ಗೋಪಾಲಕೃಷ್ಣ ರೆಡ್ಡಿ | 981200, 17/06/17 | 27820.00 |
| 13 | ಸಿ.ಆರ್.ಶಿವರಾಜ್ | 981202, 27/07/17 | 27595.00 |
| 13 | ಸಿ.ಆರ್.ಶಿವರಾಜ್ | 981203, 27/07/17 | 28793.00 |
| 14 | ದೀಪಕ್ ರಿವೈಂಡಿಂಗ್ | 981206, 14/08/17 | 26550.00 |
| 15 | ದೀಪಕ್ ರಿವೈಂಡಿಂಗ್ | 981207, 14/08/17 | 27540.00 |
| 16 | ಏವನ್ ಟೆಕ್ನಾಲಜೀಸ್ | 981208, 25/08/17 | 24100.00 |
| 17 | ಶ್ರೀನಿವಾಸ | 981209, 06/09/17 | 5300.00 |
| 18 | ನಾರಾಯಣಸ್ವಾಮಿ | 981211, 13/09/17 | 13955.00 |

| | | | |
|---|---|---|---|
| 19 | ಮಂಜು ಕಂಪ್ಯೂಟರ್ಸ್ | 981210, 14/09/17 | 4950.00 |
| 20 | ದೀಪಕ್ ಇಂಜಿನಿಯರಿಂಗ್ | 981212, 27/09/17 | 14350.00 |
| 21 | ಪ್ರಕಾಶ್ ಎಂಟರ್‌ಪ್ರೈಸಸ್ | 981214, 09/10/17 | 37508.00 |
| 22 | ಪ್ರಕಾಶ್ ಎಂಟರ್‌ಪ್ರೈಸಸ್ | 981215, 09/10/17 | 63592.00 |
| 23 | ದೀಪಕ್ ಇಂಜಿನಿಯರಿಂಗ್ | 981369, 02/11/17 | 35750.00 |
| 24 | ದೀಪಕ್ ಇಂಜಿನಿಯರಿಂಗ್ | 981368, 08/11/17 | 61360.00 |
| 25 | ಜಯಲಕ್ಷ್ಮಿ.ಎಂ | 981371, 24/11/17 | 4900.00 |

2) ಮೇಲೆ ಹೇಳಿದ ಚೆಕ್‌ಗಳ ಬಾಬ್ತು ಕಾಣಿಸಲಾದ ಮೊತ್ತಕ್ಕೂ ಮತ್ತು ದಾಖಲೆಗಳಲ್ಲಿರುವ ಖರ್ಚಿಗೂ ಹೊಂದಾಣಿಕೆಯಾಗುವುದಿಲ್ಲ. ಕೊಳತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಪಿಂಡಿಗನಗರ, ಕತ್ತಿಬೀಸನಹಳ್ಳಿ, ಶೆಟ್ಟಿಹಳ್ಳಿ, ರಮೇಶ್‌ನಗರ ಗ್ರಾಮ, ಉಪ್ಪುಕುಂಟೆ, ಚನ್ನಪಲ್ಲಿ ಮತ್ತು ಮಲಗಾನಹಳ್ಳಿ ಗ್ರಾಮಗಳ ನೈರ್ಮಲ್ಯೀಕರಣ ಮತ್ತು ಚರಂಡಿ ಸ್ವಚ್ಛತೆ ಕಾಮಗಾರಿ, ಹರಳಕುಂಟೆ ಗ್ರಾಮದ ಚರಂಡಿ ಕಾಮಗಾರಿ, ಉಪ್ಪಕುಂಟೆ, ಆಚಂಪಲ್ಲಿ ಮತ್ತು ಸೀತರೆಡ್ಡಿ ಹಳ್ಳಿ ಗ್ರಾಮಗಳ ನೀರಿನ ತೊಟ್ಟಿ ನಿರ್ಮಾಣ ಕಾಮಗಾರಿ, ಹರಳಕುಂಟೆ ಗ್ರಾಮದ ಕುಡಿಯುವ ನೀರಿನ ಸಿಸ್ಟರ್ನ್ ದುರಸ್ತಿ ಮತ್ತು ಪೈಪ್‌ಲೈನ್ ಕಾಮಗಾರಿ, ಉಪ್ಪಕುಂಟೆ ಗ್ರಾಮದ ಪೈಪ್‌ಲೈನ್ ಕಾಮಗಾರಿ, ಸೀತರೆಡ್ಡಿ ಹಳ್ಳಿ ಮತ್ತು ಆಚಂಪಲ್ಲಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿ, ಪಂಚಾಯತ್ ಕಟ್ಟಡ ದುರಸ್ತಿ ಕಾಮಗಾರಿಗಳ ಅಂದಾಜು ಪಟ್ಟಿ, ಗುತ್ತಿಗೆ ಕರಾರು, ಅಳತೆ ಪುಸ್ತಕ ಇತ್ಯಾದಿ ದಾಖಲೆಗಳು, ದೀಪಕ್ ರಿವೈಂಡಿಂಗ್ & ಇಂಜಿನಿಯರಿಂಗ್ ವರ್ಕ್ಸ್, ಶ್ರೀ ವಿನಾಯಕ ಇಂಜಿನಿಯರಿಂಗ್ ವರ್ಕ್ಸ್, ಪ್ರಕಾಶ್ ಎಂಟರ್‌ಪ್ರೈಸಸ್, ಮಂಜು ಎಂಟರ್‌ಪ್ರೈಸಸ್, ಶ್ರೀ ಲಕ್ಷ್ಮಿ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ & ಇಂಜಿನಿಯರಿಂಗ್ ವರ್ಕ್ಸ್, ಕಾವೇರಿ ಏಜೆನ್ಸೀಸ್, ಮೋಹನ್ ಟ್ರೇಡಿಂಗ್ ಕಾರ್ಪೋರೇಷನ್, ಕೀರ್ತಿ ಎಂಟರ್‌ಪ್ರೈಸಸ್ ಮತ್ತು ಜಗದೀಶ್ ಎಲೆಕ್ಟ್ರಿಕಲ್ಸ್ & ಎಂಟರ್‌ಪ್ರೈಸಸ್ ರವರಿಂದ ಸಾಮಗ್ರಿಗಳನ್ನು ಖರೀದಿ ಮಾಡಿದ ಬಾಬ್ತು ನಗದು ಬಿಲ್, ಎಲ್‌ಆರ್ ಡಿಜಿಟಲ್ ಸ್ಟುಡಿಯೋ ಮತ್ತು ಜೆರಾಕ್ಸ್ ಸೆಂಟರ್ ಸಂಸ್ಥೆಯ ರಸೀದಿ ಮುಂತಾದ ದಾಖಲೆಗಳಿವೆ;

3) ಮುಂದುವರೆದು, 14ನೇ ಹಣಕಾಸು ಯೋಜನೆಯ ಬ್ಯಾಂಕ್ ಖಾತೆಗೆ ಜಮಾ ಆದ ಹಣವನ್ನು ಅದೇ ಯೋಜನೆಗೆ ವ್ಯಯಿಸಬೇಕಾಗಿದ್ದು, ಒಂದು ಉದ್ದೇಶಕ್ಕೆ ಮೀಸಲಿರಿಸಿದ ಅನುದಾನವನ್ನು ಬೇರೆ ಉದ್ದೇಶಕ್ಕೋಸ್ಕರ ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿರುವುದು ಕಂಡು ಬಂದಿದೆ. ದೂರಿನಲ್ಲಿ ಹೇಳಿದ ಅವಧಿಯಲ್ಲಿ ₹32,20,863/-ಗಳ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಖಾತೆಗೆ ಹಾಗೂ ಗ್ರಾಮ ಪಂಚಾಯತ್‌ನ ಅಂಗವಿಕಲರ ಖಾತೆಗೆ ಒಟ್ಟು ₹10,86,371/-ಗಳನ್ನು ಸರ್ಕಾರದ ನಿರ್ದೇಶನದಂತೆ ವರ್ಗಾವಣೆ ಮಾಡಿದೆಯೆಂದು ಎದುರುದಾರರುಗಳು ಸದರಿ ವರ್ಗಾವಣೆಗಳನ್ನು ಸಮರ್ಥಿಸಿಕೊಳ್ಳುತ್ತಿದ್ದು, ಆ ಬಗ್ಗೆ ಸರ್ಕಾರದ ಆದೇಶ \ ಸುತ್ತೋಲೆ ಸಲ್ಲಿಸಿಲ್ಲ. ಕಾರಣ, ಸದರಿ ವರ್ಗಾವಣೆಗಳು ನಿಯಮಬಾಹಿರವೆಂದು ಮೇಲ್ನೋಟಕ್ಕೆ ಕಂಡು ಬಂದಿದೆ;

BD/1288/18



4) ಮೇಲಿನ ಉಪ ಖಂಡಿಕೆ–1ರಲ್ಲಿ ಹೆಸರಿಸಿದ ಸಂಸ್ಥೆಗಳಿಂದ ಸಾಮಗ್ರಿಗಳನ್ನು ಖರೀದಿಸಿದ ಬಾಬ್ತು ಎಲ್ಲಾ ಖರ್ಚುಗಳು ಒಂದು ಲಕ್ಷಕ್ಕಿಂತ ಕಡಿಮೆ ಇದ್ದು, ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ ಖರೀದಿ ಬಿಲ್ಲು \ ನಗದು ಬಿಲ್ಲಿನ ಪ್ರತಿಗಳು ಮಾತ್ರ ಲಭ್ಯವಿದೆ. ಸದರಿ ಖರೀದಿಗಳಿಗೆ ಸಂಬಂಧಿಸಿದಂತೆ, ದರಪಟ್ಟಿಗಳನ್ನು ಆಹ್ವಾನಿಸಿದ ಬಗ್ಗೆ ದಾಖಲೆಗಳಿಲ್ಲ. ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ₹5,000/– ಮೀರಿದ ₹1,00,000/–ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಕೆಎಫ್‌ಸಿ ಪರಿಚ್ಛೇದ 57ರನ್ವಯ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು. ಎದುರುದಾರರುಗಳು ಸಲ್ಲಿಸಿದ ಬಿಲ್ಲುಗಳು ಸಂಸ್ಥೆಗಳ ಹೆಸರಿನಲ್ಲಿದ್ದು, ಆದರೆ ಸದರಿ ಬಿಲ್ಲುಗಳಿಗೆ ಸಂಬಂಧಿಸಿದ ಹಣದ ಚೆಕ್‌ಗಳನ್ನು ಅದೇ ಸಂಸ್ಥೆಯ ಹೆಸರಿನಲ್ಲಿ ನೀಡದೇ, ಬೇರೆ ಸಂಸ್ಥೆ \ ವ್ಯಕ್ತಿಗಳ ಹೆಸರಿನಲ್ಲಿ ನೀಡಿರುವುದಲ್ಲದೇ, ಬೇರೆ ಬೇರೆ ದಿನಾಂಕಗಳ ಬಿಲ್ಲುಗಳ ಬಾಬ್ತು ಬೇರೆ ಬೇರೆ ಚೆಕ್‌ಗಳನ್ನು ನೀಡದೇ ಒಟ್ಟಿಗೆ ಒಂದೇ ಚೆಕ್ ಅನ್ನು ನೀಡಿರುವುದು ಕಂಡು ಬಂದಿದೆ (ಉದಾ: ಶ್ರೀ ವಿನಾಯಕ ಇಂಜಿನಿಯರಿಂಗ್ ಹೆಸರಿಗೆ ನೀಡಿದ ಚೆಕ್ ಸಂಖ್ಯೆ:981187 ದಿ:28/03/2017 ₹16,700/–). ಆದ್ದರಿಂದ, ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ, ಕೆಎಫ್‌ಸಿ ನಿಯಮಾವಳಿಗಳ ಉಲ್ಲಂಘನೆಯಾಗಿದೆ;

5) ಮೇಲಿನ ಉಪ ಖಂಡಿಕೆ–2ರಲ್ಲಿ ಹೇಳಿದ ಕಾಮಗಾರಿಗಳ ಪೈಕಿ ಅಕುಶಲ ಕಾಮಗಾರಿಗಳಾದ ಗ್ರಾಮ ನೈರ್ಮಲ್ಯೀಕರಣ, ಚರಂಡಿ ಸ್ವಚ್ಛತೆ, ರಸ್ತೆ ದುರಸ್ತಿ ಕಾಮಗಾರಿ ಇತ್ಯಾದಿ ಎಂಜಿಎನ್‌ಆರ್‌ಇಜಿ ಯೋಜನೆಯನ್ವಯ ಅಕುಶಲ ಕಾಮಗಾರಿಗಳನ್ನು ಕೂಲಿ ಕಾರ್ಮಿಕರಿಂದ ನಿರ್ವಹಿಸಬೇಕಿದ್ದು, ಕೊಳತೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ವಹಿಸಲಾದ ಕಾಮಗಾರಿಗಳ ಪೈಕಿ ಕೆಲವೊಂದು ಕಾಮಗಾರಿಗಳು ಅಕುಶಲ ಕಾಮಗಾರಿಗಳಾಗಿದ್ದು, ಕೂಲಿ ಕಾರ್ಮಿಕರಿಂದ ಸದರಿ ಕಾಮಗಾರಿಗಳನ್ನು ನಿರ್ವಹಿಸದೇ, ತುಂಡು ಗುತ್ತಿಗೆ ಆಧಾರದ ಮೇಲೆ ಗುತ್ತಿಗೆದಾರರಾದ ಶ್ರೀ.ವಿ.ನಾರಾಯಣಸ್ವಾಮಿ, ಶ್ರೀ.ಗೋಪಾಲಕೃಷ್ಣ ರೆಡ್ಡಿ ಮುಂತಾದವರಿಗೆ ಸದರಿ ಕಾಮಗಾರಿಯನ್ನು ವಹಿಸಿ, ಕಾಮಗಾರಿಯ ಬಿಲ್ಲಿನ ಮೊತ್ತವನ್ನು ಸೆಳೆದಿರುವುದು ಕಂಡು ಬಂದಿದೆ;

6) ಸದರಿ ಕಾಮಗಾರಿಗಳ ಪೈಕಿ ಕೆಲವೊಂದು ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಶ್ರೀನಿವಾಸಪುರ ರವರ ವತಿಯಿಂದ ನಿರ್ವಹಿಸಲಾಗಿದ್ದು, ಅವುಗಳೆಂದರೆ – 1)ಕೊಳತೂರು ಗ್ರಾಮ ಪಂಚಾಯತ್‌ನ ಕಟ್ಟಡ ದುರಸ್ತಿ [ಅಂದಾಜು ಮೊತ್ತ ₹0.35ಲಕ್ಷ – ಗುತ್ತಿಗೆದಾರರು ಶ್ರೀ.ಗೋಪಾಲಕೃಷ್ಣ ರೆಡ್ಡಿ], 2) ಆಚಂಪಲ್ಲಿ ಮತ್ತು ಉಪ್ಪುಕುಂಟೆ ಗ್ರಾಮದ ನೀರಿನ ತೊಟ್ಟಿ ನಿರ್ಮಾಣ [ಅಂದಾಜು ಮೊತ್ತ ತಲಾ ₹0.30 ಲಕ್ಷ – ಗುತ್ತಿಗೆದಾರರು ಶ್ರೀ.ಸಿ.ಆರ್.ಶಿವರಾಜ್ ಮತ್ತು ಶ್ರೀ.ಗೋಪಾಲಕೃಷ್ಣ ರೆಡ್ಡಿ], 3) ಆಚಂಪಲ್ಲಿ ಗ್ರಾಮದ ಮುಖ್ಯ ರಸ್ತೆಯಿಂದ ಊರಿನವರೆಗೆ ರಸ್ತೆ ದುರಸ್ತಿ ಕಾಮಗಾರಿ [ಅಂದಾಜು ಮೊತ್ತ ₹0.30 ಲಕ್ಷ – ಗುತ್ತಿಗೆದಾರರು ಶ್ರೀ.ಸಿ.ಆರ್.ಶಿವರಾಜ್],

4)ಸೀತರೆಡ್ಡಿ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ [ಅಂದಾಜು ಮೊತ್ತ ತಲಾ ₹0.40 ಲಕ್ಷ – ಗುತ್ತಿಗೆದಾರರು ಶ್ರೀ.ಗೋಪಾಲಕೃಷ್ಣ ರೆಡ್ಡಿ], 5)ಮಲಗಾನಹಳ್ಳಿ ಗ್ರಾಮದಲ್ಲಿ ನೈರ್ಮಲ್ಯೀಕರಣ ಮತ್ತು ಸ್ವಚ್ಛತೆ ಕಾಮಗಾರಿ [ಅಂದಾಜು ಮೊತ್ತ ತಲಾ ₹0.20 ಲಕ್ಷ – ಗುತ್ತಿಗೆದಾರರು ಶ್ರೀ.ಗೋಪಾಲಕೃಷ್ಣ ರೆಡ್ಡಿ] ಮತ್ತು 6) ಪಿಂಡಿಗ ನಗರದಲ್ಲಿ ನೈರ್ಮಲ್ಯೀಕರಣ ಮತ್ತು ಸ್ವಚ್ಛತೆ ಕಾಮಗಾರಿ [ಅಂದಾಜು ಮೊತ್ತ ತಲಾ ₹0.15 ಲಕ್ಷ – ಗುತ್ತಿಗೆದಾರರು ಶ್ರೀ.ಗೋಪಾಲಕೃಷ್ಣ ರೆಡ್ಡಿ], ಸದರಿ ಕಾಮಗಾರಿಗಳ ಅಳತೆಯನ್ನು 3ನೇ ಎದುರುದಾರರು ಮೆಷರ್‌ಮೆಂಟ್ \ ಚೆಕ್ ಮೆಷರ್‌ಮೆಂಟ್ ಮಾಡಿದ್ದು, ಸದರಿ ಕಾಮಗಾರಿಗಳ ಅಳತೆ ಪುಸ್ತಕದಲ್ಲಿ ಅಳತೆಯನ್ನು ದಾಖಲಿಸಲು ಮೀಸಲಿರಿಸಿರುವ ಕಾಲಂ ಖಾಲಿಯಾಗಿರುವುದಲ್ಲದೇ, ಕಾಮಗಾರಿಗಳ ಅಳತೆಗಳನ್ನು ಒಂದೇ ದಿನ ದಾಖಲಿಸಿರುವಂತೆ ಕಂಡು ಬಂದಿದೆ. ಕಾರಣ, ಸದರಿ ಕಾಮಗಾರಿಗಳ ಒಟ್ಟು ₹1.70 ಲಕ್ಷಗಳ ಖರ್ಚಿನ ಮೊತ್ತಕ್ಕೆ 3ನೇ ಎದುರುದಾರರು ಜವಾಬ್ದಾರರಾಗಿದ್ದಾರೆ;

7) ಬ್ಯಾಂಕ್ ಪಾಸ್ ಶೀಟಿನ ಅನ್ವಯ ದಿನಾಂಕ:01/01/16 ರಿಂದ 30/12/2017ರ ಅವಧಿಯಲ್ಲಿ ಕೊಳತೂರು ಗ್ರಾಮ ಪಂಚಾಯತ್‌ಗೆ 14ನೇ ಹಣಕಾಸು ಯೋಜನೆ ಅಡಿ ಬಿಡುಗಡೆಯಾದ ಅನುದಾನದ ಪೈಕಿ ಸರಿ ಸುಮಾರು ₹12,20,315/- [ಕೊಳತೂರು ಗ್ರಾಮ ಪಂಚಾಯತ್‌ನ ಖಾತೆ ಸಂಖ್ಯೆ:064095292097ಗೆ ದಿನಾಂಕ:23/05/16ರಂದು ₹1,23,134/–, ದಿ:15/11/16ರಂದು ₹2,35,000/–, ದಿ:13/02/17ರಂದು ₹2,15,000/– ಮತ್ತು ದಿ:20/11/17ರಂದು ₹4,50,000/– ವರ್ಗಾವಣೆಯಾದ ಒಟ್ಟು ₹10,23,134/–ಗಳನ್ನು ಹೊರತು ಪಡಿಸಿ] ಗಳು ದುರುಪಯೋಗವಾಗಿರುವುದು ಕಂಡು ಬಂದಿದೆ. ಸದರಿ ದುರುಪಯೋಗಕ್ಕೆ ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಜವಾಬ್ದಾರರಾಗಿದ್ದಾರೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 3ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

BD/1288/18



10. ಎರಡನೇ (2ನೇ) ಎದುರುದಾರರು ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿದ್ದು, ಸದರಿಯವರಿಂದ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಹಾಗೂ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

11. ಅದಲ್ಲದೆ, 1 ಮತ್ತು 3ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1 ಮತ್ತು 3ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

**(ನ್ಯಾಯಮೂರ್ತಿ ಎನ್.ಆನಂದ)** 21/2
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**